ಕರ್ನಾಟಕ ಸರ್ಕಾರ

# ನೆರಿಗಾ ಗ್ರಾಮ ಪಂಚಾಯತಿ ಕಾರ್ಯಾಲಯ

ಸರ್ಜಾಪುರ ಹೋಬಳಿ, ಆನೇಕಲ್ ತಾಲ್ಲೂಕು ಬೆಂಗಳೂರು ನಗರ ಜಿಲ್ಲೆ

ಗ್ರಾ ಪಂ:ಸಿ.ಆರ್/26/2023-24

ದಿನಾಂಕ: 29/11/2023

## -:ಸ್ವಾಧೀನಪಡಿಸಿಕೊಳ್ಳಲು ಅನುಮತಿ ಪತ್ರ:-

## (Occupancy Certificate for the Constructed House)

ಬೆಂಗಳೂರು ನಗರ ಜಿಲ್ಲೆ, ಅನೇಕಲ್ ತಾಲ್ಲೂಕು ಸರ್ಜಾಪುರ ಹೋಬಳಿ, ನೆರಿಗಾ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗೋಣಿಘಟ್ಟಪುರ ಗ್ರಾಮದ ಸರ್ವೆ ನಂ 37/5 ರಲ್ಲಿ 1 ಎಕರೆ 0-20 ಗುಂಟೆ ಮತ್ತು ಸರ್ವೆ ನಂ 37/6 ರಲ್ಲಿ 0-10 ಗುಂಟೆ ಒಟ್ಟು ವಿಸ್ತೀರ್ಣ 01 ಎಕರೆ 0-30 ಗುಂಟೆ ಜಮೀನಿನಲ್ಲಿ ಶ್ರೀ ಬಾಬು ರೆಡ್ಡಿ ರವರ ಪರವಾಗಿ "M/s Signature Dwellings Private Limited ರವರ ಪರವಾಗಿ Sri Prashanth Narayanan" ರವರು ಮೇಲಿನ ಸರ್ವೆ ನಂಬರ್‌ನಲ್ಲಿ ನಿರ್ಮಿತವಾಗಿರುವ "Signature Meadows" ಎಂಬ ವಸತಿ ಸಮುಚ್ಚಯ ಕಟ್ಟಡವನ್ನು ಆನೇಕಲ್ ಯೋಜನಾ ಪ್ರಾಧಿಕಾರದದಿಂದ ನಕ್ಷೆ ಅನುಮೋದನೆ ಪಡೆದು ಸ್ಟಿಲ್ಟ್ + ನೆಲ ಮತ್ತು ಮೇಲಿನ ಮೂರು ಮಹಡಿಗಳಲ್ಲಿ ಒಟ್ಟು 180 ಘಟಕಗಳ ಕಟ್ಟಡವನ್ನು ಭೌತಿಕವಾಗಿ ಪೂರ್ಣಗೊಳಿಸಿರುತ್ತಾರೆ. ಹಾಗೂ ಸದರಿ ಕಟ್ಟಡದ ಕಾಮಗಾರಿಯು ಉತ್ತಮ ಗುಣಮಟ್ಟದಿಂದ ಪೂರ್ಣಗೊಂಡಿರುವುದು ನನಗೆ ಮನವರಿಕೆಯಾಗಿದೆ ಆದ್ದರಿಂದ ಕಟ್ಟಡವನ್ನು ಸ್ವಾಧೀನ (Occupancy) ಪಡಿಸಿಕೊಳ್ಳಲು ಈ ಅನುಮತಿ ಪತ್ರವನ್ನು ನೀಡಿರುತ್ತದೆ.

ಪಂಚಾಯತಿ ಅಭಿವೃದ್ಧಿ ಅಧಿಕಾರಿ
ನೆರಿಗಾ ಗ್ರಾಮ ಪಂಚಾಯಿತಿ
ಆನೇಕಲ್ ತಾಲ್ಲೂಕು

ದೂರವಾಣಿ : 080-27835122
ಫ್ಯಾಕ್ಸ್ : 080-27836569

# ಆನೇಕಲ್ ಯೋಜನಾ ಪ್ರಾಧಿಕಾರ

"ಅಣ್ಣ" ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು-560 099.

www.anekal.tpa.gov.in, www.e-vinyasa.kar.nic.in

ಸಂಖ್ಯೆ:ಆಯೋಪ್ರಾ:ಸಿಸಿ:127:2022-23 ದಿನಾಂಕ: 30 SEP 2023

## "ತಾಂತ್ರಿಕ ಅಭಿಪ್ರಾಯ"

ವಿಷಯ:ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಗೋಣಿಘಟ್ಟಪುರ ಗ್ರಾಮದ ಸ.ನಂ.37/5ರಲ್ಲಿನ 01ಎಕರೆ 20ಗುಂಟೆ ಮತ್ತು 37/6ರಲ್ಲಿನ 0-10ಗುಂಟೆ ಒಟ್ಟು 01ಎಕರೆ 30ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ಅನುಮೋದನೆಯಾಗಿರುವ ವಸತಿ ಉದ್ದೇಶದ ಏಕ ನಿವೇಶನ ನಕ್ಷೆಯಲ್ಲಿನ ಖಾತಾ ನಂ.37/5-37/6ರಲ್ಲಿ 7082.00ಚ.ಮೀ. ವಿಸ್ತೀರ್ಣದಲ್ಲಿ ಸ್ಟಿಲ್ಟ್ + ನೆಲ ಮತ್ತು ಮೇಲಿನ ಮೂರು ಅಂತಸ್ತುಗಳಲ್ಲಿ ಒಟ್ಟು 180 ಘಟಕಗಳ ವಸತಿ ಸಮುಚ್ಚಯ (18784.43ಚ.ಮೀ.) ಕಟ್ಟಡಕ್ಕೆ ಕಟ್ಟಡ ಪೂರ್ಣಗೊಂಡ ಪ್ರಮಾಣ ಪತ್ರ ನೀಡುವ ಸಂಬಂಧ ತಾಂತ್ರಿಕ ಅಭಿಪ್ರಾಯ ನೀಡುವ ಬಗ್ಗೆ.

ಉಲ್ಲೇಖ:
1. ಶ್ರೀ ಬಾಬುರೆಡ್ಡಿ.ಓ ಬಿನ್ ಓಬಯ್ಯರೆಡ್ಡಿ ರವರ ಮನವಿ ದಿನಾಂಕ:20.09.2023.
2. ಪ್ರಾಧಿಕಾರದ ಪತ್ರ ಸಂಖ್ಯೆ:ಆಯೋಪ್ರಾ/ಸಿಸಿ/127/22-23 ದಿನಾಂಕ: 06.07.2022.
3. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಇವರ ಪತ್ರ ಸಂಖ್ಯೆ: AW-339825 PCB ID:108082 ದಿನಾಂಕ:29.09.2023.
4. ಶ್ರೀ ಪ್ರವೀಣ್.ಬಿ.ವಿ.,ವಾಸ್ತುಶಿಲ್ಪಿ ಇವರು ಕಟ್ಟಡ ಪೂರ್ಣಗೊಂಡಿರುವ ಬಗ್ಗೆ ಪ್ರಮಾಣ ಪತ್ರ ನೀಡಿದ ದಿನಾಂಕ:19.09.2023.
5. ಶ್ರೀ ರಮೇಶ್.ಡಿ.ಬಿ, ಇವರು ಕಟ್ಟಡದ Stability ಬಗ್ಗೆ ಪ್ರಮಾಣ ಪತ್ರ ನೀಡಿದ ದಿನಾಂಕ:19.09.2023.
6. ಪ್ರಾಧಿಕಾರಕ್ಕೆ ಭದ್ರತಾ ಠೇವಣಿ ಪಾವತಿಸಿದ ಬಗ್ಗೆ ದಿನಾಂಕ:02.07.2022 ಡಿ.ಡಿ. ಸಂಖ್ಯೆ:007255 ರೂ.9,52,000/-
7. ದಿನಾಂಕ:07.08.2020ರಂದು ನಡೆದ ಪ್ರಾಧಿಕಾರದ 72ನೇ ಸಭೆಯ ವಿಷಯ ಸಂಖ್ಯೆ:29ರ ನಿರ್ಣಯ.

********

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರಲ್ಲಿ ಅರ್ಜಿದಾರರು ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿ ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಗೋಣಿಘಟ್ಟಪುರ ಗ್ರಾಮದ ಸ.ನಂ.37/5ರಲ್ಲಿನ 01ಎಕರೆ 20ಗುಂಟೆ ಮತ್ತು 37/6ರಲ್ಲಿನ 0-10ಗುಂಟೆ ಒಟ್ಟು 01ಎಕರೆ 30ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ಅನುಮೋದನೆಯಾಗಿರುವ ವಸತಿ ಉದ್ದೇಶದ ಏಕ ನಿವೇಶನ ನಕ್ಷೆಯಲ್ಲಿನ ಖಾತಾ ನಂ.37/5-37/6ರಲ್ಲಿ 7082.00ಚ.ಮೀ. ವಿಸ್ತೀರ್ಣದಲ್ಲಿ ಸ್ಟಿಲ್ಟ್+ನೆಲ ಮತ್ತು ಮೇಲಿನ ಮೂರು ಅಂತಸ್ತುಗಳಲ್ಲಿ ಒಟ್ಟು 180 ಘಟಕಗಳ ವಸತಿ ಸಮುಚ್ಚಯ (18784.43ಚ.ಮೀ.) ಕಟ್ಟಡಕ್ಕೆ ಕಟ್ಟಡ ಪೂರ್ಣಗೊಂಡ ಪ್ರಮಾಣ ಪತ್ರ ನೀಡಲು ಕೋರಿರುತ್ತಾರೆ.

ಮು.ತಿ.ನೋ.

ಪರಿಶೀಲಿಸಲಾಗಿ, ಉಲ್ಲೇಖ(2)ರಲ್ಲಿ ಸರ್ಜಾಪುರ ಹೋಬಳಿ, ಗೋಣಿಘಟ್ಟಪುರ ಗ್ರಾಮದ ಸ.ನಂ.37/5ರಲ್ಲಿನ 01ಎಕರೆ 20ಗುಂಟೆ ಮತ್ತು 37/6ರಲ್ಲಿನ 0-10ಗುಂಟೆ ಒಟ್ಟು 01ಎಕರೆ 30ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ಅನುಮೋದನೆಯಾಗಿರುವ ವಸತಿ ಉದ್ದೇಶದ ಏಕ ನಿವೇಶನ ನಕ್ಷೆಯಲ್ಲಿನ ಖಾತಾ ನಂ.37/5-37/6ರಲ್ಲಿ 7082.00ಚ.ಮೀ. ವಿಸ್ತೀರ್ಣದಲ್ಲಿ ಸ್ಟಿಲ್ಟ್ + ನೆಲ ಮತ್ತು ಮೇಲಿನ ಮೂರು ಅಂತಸ್ತುಗಳಲ್ಲಿ ಒಟ್ಟು 180 ಘಟಕಗಳ ವಸತಿ ಸಮುಚ್ಚಯ (18784.43ಚ.ಮೀ.) ಕಟ್ಟಡ ನಿರ್ಮಾಣಕ್ಕೆ ಅನುಮೋದನೆ ನೀಡಿ ಪ್ರಾರಂಭಿಕ ಪ್ರಮಾಣ ಪತ್ರ ನೀಡಲಾಗಿದೆ.

ಉಲ್ಲೇಖ(3)ರಂತೆ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಯಿಂದ ನಿರಾಕ್ಷೇಪಣಾ ಪತ್ರ ನೀಡಿರುತ್ತಾರೆ. ಉಲ್ಲೇಖ(4)ರಲ್ಲಿ ಶ್ರೀ ಪ್ರವೀಣ್.ಬಿ.ವಿ., ವಾಸ್ತುಶಿಲ್ಪಿ ಮತ್ತು ಉಲ್ಲೇಖ(5)ರಲ್ಲಿ ಶ್ರೀ ರಮೇಶ್.ಡಿ.ಬಿ, ಇವರು ಕಟ್ಟಡ ಪೂರ್ಣಗೊಂಡಿರುವ ಬಗ್ಗೆ ಮತ್ತು ಕಟ್ಟಡದ Stability ಬಗ್ಗೆ ಪ್ರಮಾಣ ಪತ್ರ ನೀಡಿರುತ್ತಾರೆ.

ಅರ್ಜಿದಾರರು ಕಟ್ಟಡ ಕಾಮಗಾರಿ ಪೂರ್ಣಗೊಳಿಸಿದ್ದು, ಕಟ್ಟಡದಲ್ಲಿ ಕೆಲವೊಂದು ಆಂತರಿಕ ಬದಲಾವಣೆಗಳಾಗಿರುವುದರಿಂದ ಉಲ್ಲೇಖ(6)ರಲ್ಲಿ ಪಾವತಿಸಿರುವ **ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು ಹಾಗೂ ಪರಿಶೀಲನಾ ಶುಲ್ಕ ರೂ.20,000/-ಗಳನ್ನು ಚಲನ್ ಸಂಖ್ಯೆ:812 ದಿನಾಂಕ: 27.09.2023ರಂತೆ, ಪಾವತಿಸಿಕೊಂಡು ಉಲ್ಲೇಖ(7)ರ ಸಭೆಯ ತೀರ್ಮಾನದಂತೆ,ಕೆಳಕಂಡ ನಿಬಂಧನೆಗಳಿಗೊಳಪಟ್ಟು ಗ್ರಾಮಪಂಚಾಯ್ತಿ ವತಿಯಿಂದ ಕಟ್ಟಡ ಪೂರ್ಣಗೊಂಡ ಬಗ್ಗೆ ಪ್ರಮಾಣ ಪತ್ರ ನೀಡುವ ಸಂಬಂಧ ಪ್ರಾಧಿಕಾರದಿಂದ ತಾಂತ್ರಿಕ ಅಭಿಪ್ರಾಯ ನೀಡಲಾಗಿದೆ.**

1. ಸದರಿ ಕಟ್ಟಡವನ್ನು ಅನುಮೋದಿತ ನಕ್ಷೆಯಲ್ಲಿ ನಮೂದಿಸಿರುವಂತೆ ವಸತಿ ಉಪಯೋಗಕ್ಕಾಗಿ ಮಾತ್ರ ಉಪಯೋಗಿಸತಕ್ಕದ್ದು.
2. ಉಲ್ಲೇಖ(2)ರಲ್ಲಿ ನೀಡಿರುವ ಪ್ರಾರಂಭಿಕ ಪ್ರಮಾಣ ಪತ್ರದಲ್ಲಿ ಉಲ್ಲೇಖಿಸಿರುವ ಷರತ್ತುಗಳನ್ನು ಪರಿಪಾಲಿಸತಕ್ಕದ್ದು.
3. ಕಟ್ಟಡದ ಸ್ಥಿರತೆಯ ಬಗ್ಗೆ ವಾಸ್ತುಶಿಲ್ಪಿ/ಇಂಜಿನಿಯರ್ ರವರುಗಳೇ ಸಂಪೂರ್ಣ ಜವಾಬ್ದಾರರಾಗಿರುತ್ತಾರೆ. ಈ ಸಂಬಂಧ ಯಾವುದೇ ಅನಾಹುತಗಳಿಗೆ ಈ ಯೋಜನಾ ಪ್ರಾಧಿಕಾರವು ಜವಬ್ದಾರಿಯಾಗಿರುವುದಿಲ್ಲ.
4. ಈ ಕಟ್ಟಡ ಪೂರ್ಣಗೊಳಿಸಿದ ಪ್ರಮಾಣ ಪತ್ರ ನೀಡಿರುವ ಮಾತ್ರಕ್ಕೆ ಯಾವುದೇ ನಾಗರೀಕ ಸೌಲಭ್ಯವನ್ನು ಅರ್ಜಿದಾರರಿಗೆ ನೀಡುವ ಹೊಣೆಗಾರಿಕೆ ಈ ಪ್ರಾಧಿಕಾರಕ್ಕಿರುವುದಿಲ್ಲ.
5. ಕಟ್ಟಡದ ಮುಂಭಾಗದ ರಸ್ತೆಯನ್ನು ಅಭಿವೃದ್ಧಿ/ನಿರ್ವಹಣೆಯನ್ನು ಅಭಿವೃದ್ಧಿದಾರರು/ಕಟ್ಟಡದ ಮಾಲೀಕರ ಸಂಘದವರು ಮಾಡತಕ್ಕದ್ದು.
6. ಅಭಿವೃದ್ಧಿ ಯೋಜನೆಯಂತೆ ಸೌರಶಕ್ತಿಯ ವಿದ್ಯುತ್‌ಅನ್ನು ಅಳವಡಿಸಿ ಉಪಯೋಗಿಸತಕ್ಕದ್ದು.
7. ಪ್ರಸ್ತಾವಿತ ಪ್ರದೇಶದಲ್ಲಿ ಅನುಮೋದಿತ ಕಟ್ಟಡ ನಕ್ಷೆಯಂತೆ ವಾಹನ ನಿಲುಗಡೆಗೆ ಕಾಯ್ದಿರಿಸಿದ ಪ್ರದೇಶವನ್ನು ಅದೇ ಉದ್ದೇಶಕ್ಕಾಗಿ ಮಾತ್ರ ಉಪಯೋಗಿಸತಕ್ಕದ್ದು.
8. STPನ್ನು KSPCB ರವರ consent order no.AW-339825, PCB ID:108082 ದಿನಾಂಕ:29.09.2023ರಲ್ಲಿನ ಸೂಚನೆಯಂತೆ, ಅಭಿವೃದ್ಧಿಪಡಿಸಿ ನಿರ್ವಹಣೆ ಮಾಡತಕ್ಕದ್ದು ಹಾಗೂ ಎಲ್ಲಾ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

ಮು.ತಿ.ನೋ.

9. ಸಾರ್ವಜನಿಕರಿಗಾಗಿ ವಾಹನ ನಿರ್ವಹಣೆಗೆ ಕಾಯ್ದಿರಿಸಿದ ಪ್ರದೇಶವನ್ನು ಅದೇ ಉದ್ದೇಶಕ್ಕೆ ಉಪಯೋಗಿಸತಕ್ಕದ್ದು.

10. ಪ್ರಸ್ತಾವಿತ ಪ್ರದೇಶದಲ್ಲಿ ಬರುವ 'ಬ' ಖರಾಬು ಪ್ರದೇಶವು ಸರ್ಕಾರದ ಸ್ವತ್ತಾಗಿದ್ದು, ಸದರಿ ಪ್ರದೇಶವನ್ನು ಗುರುತಿಸಿ ನಾಮಫಲಕಗಳನ್ನು ಅಳವಡಿಸತಕ್ಕದ್ದು.

11. ಹಸಿ ಕಸ ಹಾಗೂ ಒಣ ಕಸವನ್ನು ಪ್ರತ್ಯೇಕವಾಗಿ ಶೇಖರಿಸಿ ಗೊಬ್ಬರವಾಗಿ ಮಾರ್ಪಡಿಸತಕ್ಕದ್ದು.

12. ಸೋಲಾರ್ ಲೈಟ್ಸ್ ಮತ್ತು ಸೋಲಾರ್ ವಾಟರ್‌ಹಿಟರ್ ವ್ಯವಸ್ಥೆಯನ್ನು ಕಟ್ಟಡದಲ್ಲಿ ಕಡ್ಡಾಯವಾಗಿ ಅಳವಡಿಸತಕ್ಕದ್ದು.

13. ತಾಂತ್ರಿಕ ಅಭಿಪ್ರಾಯ ನೀಡುವ ಸಂಬಂಧ ಸಲ್ಲಿಸಲಾಗಿರುವ ಯಾವುದೇ ದಾಖಲೆ ಅಥವಾ ಬೇರೆ ಯಾವುದೇ ಮಾಹಿತಿಗಳು ತಪ್ಪಾಗಿದ್ದಲ್ಲಿ ಮೇಲ್ಕಂಡ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಈ ತಾಂತ್ರಿಕ ಅಭಿಪ್ರಾಯವು ಯಾವ ಪೂರ್ವ ಸೂಚನೆಯು ಇಲ್ಲದೇ ತಂತಾನೆ ರದ್ದುಗೊಳ್ಳುತ್ತದೆ.

30/09/2023

ಸದಸ್ಯ-ಕಾರ್ಯದರ್ಶಿ ಹಾಗೂ ನಗರ ಮತ್ತು
ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಆನೇಕಲ್ ಯೋಜನಾ ಪ್ರಾಧಿಕಾರ,
ಆನೇಕಲ್.

ಇವರಿಗೆ,
**ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳು,**
**ನೆರಿಗಾ ಗ್ರಾಮಪಂಚಾಯ್ತಿ,**
**ಸರ್ಜಾಪುರ ಹೋಬಳಿ,**
**ಆನೇಕಲ್ ತಾಲ್ಲೂಕು**